***ದಿನಾಂಕ: 02-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಮುಂದುವರೆದ ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ***

ನಾನು ಮಾನ್ಯ ತಹಶೀಲ್ದಾರ್, ತರೀಕೆರೆಯವರಿಗೆ ದಿ:*07-1-2013* ರಂದು ನೀಡಿದ ಅರ್ಜಿಯ ಪ್ರತಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-*7* ಎಂದು, ಸಾಕ್ಷಿ ಸಹಿಯನ್ನು ನಿಪಿ-*7*(ಎ) ಎಂದು ಗುರುತಿಸಲಾಯ್ತು.

***ಪಾಟೀ ಸವಾಲು : 1* ನೇ *ಆರೋಪಿ ಪರ* ಶ್ರೀ ಎ ಆರ್ ಕೆ *ವಕೀಲರಿಂದ.***

ನಾನು ಎಂಕಾಂ ಪದವಿ ಓದಿರುತ್ತೇನೆ. ನಾನು ಈಗ್ಗೆ *20* ವರ್ಷಗಳ ಹಿಂದೆ ಬಾವಿಕೆರೆಯ ಗ್ರಾಮ ಪಂಚಾಯ್ತಿ ಅಧ್ಯಕ್ಷನಾಗಿದ್ದೆನು. *2010* ರಲ್ಲಿ ಗ್ರಾಮ ಪಂಚಾಯ್ತಿ ಚುನಾವಣೆಗೆ ಸ್ಪರ್ದಿಸಿದ್ದು, ಸೋತಿರುತ್ತೇನೆ. *2010* ರಲ್ಲಿ *1* ನೇ ಆರೋಪಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು, ಅದ್ಯಕ್ಷರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ವಿ ಎಸ್ ಎಸ್ ಎನ್ ಸೊಸೈಟಿಯಲ್ಲಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ನನಗೂ *1* ನೇ ಆರೋಪಿಗೂ ರಾಜಕೀಯ ದ್ವೇಷಗಳಿವೆ ಎಂದರೆ ಸರಿಯಲ್ಲ. ನಾನು *1* ನೇ ಆರೋಪಿಯ ವಿರೋಧಿ ಬಣದಲ್ಲಿ ಇರುತ್ತೇನೆಂದರೆ ಸಾಕ್ಷಿಯು ಆರೋಪಿಯ ಸೊಸೈಟಿಯಲ್ಲಿ ನಡೆದ ಅವ್ಯವಹಾರದ ಬಗ್ಗೆ ತಪ್ಪು ಎಂದು ಹೇಳುವವರ ಜೊತೆ ಇದ್ದೆನೆಂದು ನುಡಿಯುತ್ತಾರೆ. ನನಗೂ *1* ನೇ ಆರೋಪಿಗೂ ದ್ವೇಷವಿದ್ದ ಕಾರಣದಿಂದ ಪ್ರಕರಣಗಳಲ್ಲಿ ನಾನು ಅವರ ವಿರುದ್ದ ಸಾಕ್ಷಿ ನುಡಿಯುತ್ತೇನೆಂದರೆ ಸರಿಯಲ್ಲ.

ನಿಪಿ*7* ಅರ್ಜಿಯನ್ನು ತಹಶೀಲ್ದಾರ್ ರವರಿಗೆ, ನಾವು ಆರೋಪಿತರು ಅಕ್ರಮವಾಗಿ ಅಸೆಸ್ ಮೆಂಟ್ ಬುಕ್ಕಲ್ಲಿ ಖಾತೆಯನ್ನು ತಿದ್ದಿ ನಮೂದಿಸಿದ್ದರು, ಆ ಕಾರಣಕ್ಕೆ ನೀಡಿರುತ್ತೇನೆ. ಆ ಸಮಯದಲ್ಲಿ ನಾನು ಗ್ರಾಮ ಪಂಚಾಯ್ತಿ ಸದಸ್ಯನಾಗಿರಲಿಲ್ಲ. ನಾನು ಪಂಚಾಯ್ತಿಯ ಪಿ ಡಿ ಒ ರವರಿಗೆ ಅಸೆಸ್ ಮೆಂಟ್ ಪುಸ್ತಕದ ಬಗ್ಗೆ ಕೇಳಲಾಗಿ ಅವರು ಅಸೆಸ್ ಮೆಂಟ್ ಪುಸ್ತಕವನ್ನು ನಮಗೆ ತೋರಿಸಿದ್ದು, ಅದರಲ್ಲಿ ತಿದ್ದಿರುವ ಬಗ್ಗೆ ಗೊತ್ತಾಗಿರುತ್ತದೆ. ಸದರಿ ತಿದ್ದಿದ ಅಸೆಸ್‌ಮೆಂಟ್ ಪ್ರತಿಯನ್ನು ನ್ಯಾಯಾಲಯದಲ್ಲಿ ನೋಡಿರುತ್ತೇನೆ. ಸದರಿ ಅಸೆಸ್ ಮೆಂಟ್ ಪ್ರತಿಯಲ್ಲಿ ಕಾನೂನು ಬಾಹಿರವಾಗಿ ಸೇರ್ಪಡೆ ಮಾಡಿರುತ್ತಾರೆ.

*1* ನೇ ಆರೋಪಿ ನಿವೇಶನದ ಬಗ್ಗೆ ನೀಡಿದ ಅರ್ಜಿಯನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ಅದನ್ನು ಪಿ ಡಿ ಒ ರವರು ಪಡೆಯುತ್ತಾರೆಂದು ನುಡಿಯತ್ತಾರೆ. ನಾನು ಪಂಚಾಯ್ತಿಗೆ ಹೋದಾಗ ಅಸೆಸ್ ಮೆಂಟ್ ಪುಸ್ತಕ ಪಿ ಡಿ ಒ ಪಾಂಡರುಂಗ ರವರ ವಶದಲ್ಲಿತ್ತು. ಸದರಿ ಅಸೆಸ್‌ಮೆಂಟ್ ಪುಸ್ತಕದಲ್ಲಿ *2* ನೇ ಆರೋಪಿಯು ತಿದ್ದುಪಡಿ ಮಾಡಿ ತನ್ನ ಸಹಿಯನ್ನು ಹಾಕಿರುತ್ತಾರೆ. ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ನಿಪಿ-*7* ರಲ್ಲಿ ತಿಳಿಸಿದಂತೆ ಅಸೆಸ್ ಮೆಂಟ್‌ನ ನಕಲುಗಳನ್ನು ಮಾಹಿತಿ ಹಕ್ಕಿನ ಅಡಿ ಪಡೆದಿದ್ದು, ಸದರಿ ಮಾಹಿತಿ ಹಕ್ಕಿನ ದಾಖಲಾತಿಗಳನ್ನು ಪೋಲೀಸರ ಮುಂದೆ ಹಾಜರುಪಡಿಸಿರುವುದಿಲ್ಲ. ನಿಪಿ-*7* ರಲ್ಲಿ ಹೇಳಿದಂತೆ ದಿನಾಂಕ ***26-11-2013*** ಕ್ಕೆ ಅರ್ಜಿಯನ್ನು ಕೊಟ್ಟಿದ್ದೆನು ಎಂದು ತಪ್ಪಾಗಿ ನಮೂದಾಗಿರುತ್ತದೆ. ನನ್ನ ರಾಜಕೀಯ ವೈಷಮ್ಯಕ್ಕೆ *1* ನೇ ಆರೋಪಿ ವಿರುದ್ದ ನಿಪಿ-*7* ನ್ನು ಸೃಷ್ಟಿಸಿ ದಾಖಲಿಸಿರುತ್ತೇವೆಂದರೆ ಸರಿಯಲ್ಲ. ವಿವಾದಿತ ಜಾಗವು ಈ ಮುಂಚೆ ಖಾಲಿ ಜಾಗ ಇದ್ದು, ಈಗ ಅದಕ್ಕೆ ಕಾಂಪೌಂಡ್ ಕಟ್ಟಿರುತ್ತಾರೆ. ವಿವಾದಿತ ಜಾಗದ ಅಕ್ಕಪಕ್ಕದಲ್ಲಿರುವ ರಹೀಂ, ಖಲಂದರ್ ಇರುವ ಜಾಗವು ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ವಿವಾದಿತ ಜಾಗವು ಯಾರಿಗೆ ಸೇರಿದ್ದು, ಎಂದು ಗೊತ್ತು. ಉಳಿದಂತೆ ಅಕ್ಕಪಕ್ಕದ ಜಾಗದ ಬಗ್ಗೆ ನನಗೆ ಗೊತ್ತಿಲ್ಲ. ರಹೀಂ, ಖಲಂದರ್ ರವರು ಇರುವಂತಹ ಜಾಗವು ಕೂಡಾ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿದ್ದಾಗಿದ್ದು, ಅವರು ನಮ್ಮ ಅನುಯಾಯಿಗಳಾದ್ದರಿಂದ ಅವರ ಬಗ್ಗೆ ಚಕಾರ ಎತ್ತುವುದಿಲ್ಲ ಎಂದರೆ ಸರಿಯಲ್ಲ. *1* ನೇ ಆರೋಪಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿಲ್ಲ, ಯಾವುದೇ ತಿದ್ದುಪಡಿ ಮಾಡಿಸಿಲ್ಲ, ಯಾವತ್ತೂ ವಿವಾದಿತ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು *1* ನೇ ಆರೋಪಿಯ ಮೇಲೆ ದ್ವೇಷದಿಂದ ಸುಳ್ಳು ಅರ್ಜಿಯನ್ನು ತಹಶೀಲ್ದಾರ್ ರವರಿಗೆ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಪೋಲೀಸರಿಗೆ ಹೇಳಿಕೆಯನ್ನು ವಿವಾದಿತ ಸ್ಥಳದಲ್ಲಿ ಪೋಲೀಸರು ಮಹಜರ್ ಮಾಡುವ ಕಾಲಕ್ಕೆ ಬಂದಾಗ ನೀಡಿದ್ದೇನೆಂದು ನುಡಿಯುತ್ತಾರೆ. ನನ್ನ ಸಮಕ್ಷಮ ಪೋಲೀಸರು ಮಹಜರ್ ಮಾಡಿಲ್ಲ ಹಾಗೂ ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಮಹಜರಿಗೆ ಸಹಿ ಮಾಡಿರುತ್ತೇನೆ. ನಾನು ಮಹಜರಿಗೆ

ಮಾಡಿಲ್ಲ  ಎಂದರೆ ಸರಿಯಲ್ಲ. *1* ನೇ ಆರೋಪಿ ಆರ್ಥಿಕವಾಗಿ ಚೆನ್ನಾಗಿದ್ದಾರೆಂದರೆ ಸರಿ. ಆದ್ದರಿಂದ ಅವರಿಗೆ ನಿವೇಶನದ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿ ಕೊಡುವುದನ್ನೇ ವೃತ್ತಿ ಮಾಡಿಕೊಂಡಿದ್ದು ಸುಳ್ಳು ಅರ್ಜಿ ನೀಡಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***

ಕರ್ನಾಟಕ ಸರ್ಕಾರ

ಅಧಿಕ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ತರೀಕರೆ

ಸಿ.ಸಿ.ನಂ. /20 .

ಪಿ.ಡಬ್ಲ್ಯೂ:
ಸಿ.ಡಬ್ಲ್ಯೂ:

ಹೆಸರು :

ತಂದೆಯ ಹೆಸರು :

ವಯಸ್ಸು : ವರ್ಷ

ಉದ್ಯೋಗ :

ವಾಸಸ್ಥಳ :

ದಿನಾಂಕ: 00-07-2015 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ

ನನಗೆ ಆರೋಪಿ ಗೊತ್ತು. ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲ ಮತ್ತು ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಕೊಂಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ಸಾಕ್ಷಿ ನಿಪಿ-1 ಪಂಚನಾಮೆಯಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಲಕ್ಕವಳ್ಳಿ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಎಂಒ-1 ಸರಿಂದ 5 ರಮೇಲೆ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಎಂಒ-1(ಬಿ) ರಿಂದ 5(ಬಿ) ಎಂದು ಗುರುತಿಸಲಾಯಿತು.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)*

***ಪಾಟೀಸವಾಲುಃ ಸ.ಸ.ಅ. ರವರಿಂದಃ***

*ದಿಃ08-03-2014 ರಂದು ಸಂಜೆ 5.45 ರಿಂದ 6-30 ಗಂಟೆಯ ಸಮಯದಲ್ಲಿ ಬಾವಿಕೆರೆಯ ಬಸ್ ನಿಲ್ದಾಣದ ಹಿಂಭಾಗದಲ್ಲಿ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಪೋಲೀಸವರು ದಾಳಿ ಮಾಡಿ ನ್ಯಾಯಾಲದ ಮುಂದೆ ಇರುವ ಆರೋಪಿತನಿಂದ ಎಂಒ-1 ರಿಂದ 6 ರನ್ನು ವಶಪಡಿಸಿಕೊಂಡು ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಹಾಗೂ ಚಾಸಾ-3 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ಮತ್ತು ಎಂಒ-1 ರಿಂದ 5 ಕ್ಕೆ ಸ್ಥಳದಲ್ಲೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.*

***ಮರುವಿಚಾರಣೆಃ ಇರುವುದಿಲ್ಲ***

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

*ಅಧಿಕ ಪ್ರ.ದ.ನ್ಯಾ.ದಂ. ರವರು,*
*ತರೀಕೆರೆ*

**ಕರ್ನಾಟಕ ಸರ್ಕಾರ**

**ಅಧಿಕ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ತರೀಕೆರೆ**

**ಸಿ.ಸಿ.ನಂ. /2015.**

ಪಿ.ಡಬ್ಲ್ಯೂ: 1
ಸಿ.ಡಬ್ಲ್ಯೂ: 1

| | |
|---|---|
| ಹೆಸರು | : ನಿಸ್ಸಾರ್ ಅಹಮದ್ |
| ತಂದೆಯ ಹೆಸರು | : ಬಷೀರ್ ಅಹಮದ್ |
| ವಯಸ್ಸು | : 30 ವರ್ಷಗಳು |
| ಉದ್ಯೋಗ | : ಬಿಲ್ಡಿಂಗ್ ಕೆಲಸ |
| ವಾಸಸ್ಥಳ | : ರಂಗೇನ ಹಳ್ಳಿ. |

**ದಿನಾಂಕ: 29-07-2015 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ಆರೋಪಿ 1 ನನ್ನ ಚಿಕ್ಕಮ್ಮ. ಆರೋಪಿ-2 ಮತ್ತು 3 ನನ್ನ ತಮ್ಮಂದಿರು. ಚಾಸಾ-2 ನನ್ನ ಅಣ್ಣ. ಚಾಸಾ-3 ನನ್ನ ತಂಗಿ. ನನಗೆ ಆರೋಪಿತರುಗಳು ದೊಣ್ಣೆಯಿಂದ ಹೊಡೆದಿರುವುದಿಲ್ಲ ರಕ್ತ ಗಾಯ ಮಾಡಿರುವುದಿಲ್ಲ. ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿ ಹೇಳಿಕೆಯ ದೂರಿನ ಮೇಲೆ ಇರುವ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ.ಪಿ-1 ಮತ್ತು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಿರುತ್ತಾರೆ. ನಿ.ಪಿ-1 ರಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲು: ಸ.ಸ.ಅ. ರವರಿಂದ:**

*ದಿಃ27-10-2014 ರಂದು ಸಂಜೆ 5.30 ಗಂಟೆಯ ಸಮಯದಲ್ಲಿ ಚಾಸಾ-4 ರವರು ಸಂತೆಗೆ ಹೋಗಿ ಸಾಮಾನು ಖರೀದಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ 1 ಮತ್ತು 3ನೇ ಆರೋಪಿಗಳು ಚಾಸಾ-4ರವರನ್ನು ಕರೆದಾಗ ಚಾಸಾ-4ರವರು ಅವರ ಬಳಿ ಹೋಗಲಿಲ್ಲ ಎಂಬ ಕಾರಣಕ್ಕೆ 1ನೇ ಆರೋಪಿ ಚಾಸಾ-4 ರವರಿಗೆ ಅವ್ಯಾಚ ಶಬ್ದದಿಂದ ಬೈದು ಕೈಯಿಂದ ಹೊಡೆದು ಅವಮಾನ ಮಾಡಿದರು ಎಂದರೆ ಸರಿಯಲ್ಲ. 3ನೇ ಆರೋಪಿ ಚಾಸಾ-3ರವರಿಗೆ ಕೈಯಿಂದ ಹೊಡೆದು ಮಾನಭಂಗ ಮಾಡಲು ಪ್ರಯತ್ನಿಸಿರುತ್ತಾರೆಂದರೆ ಸರಿಯಲ್ಲ. ಇದೇ ವಿಚಾರಕ್ಕೆ ಅದೇ ದಿನ ಸಂಜೆ 6-00 ಗಂಟೆಯ ಸಮಯದಲ್ಲಿ ನಾನು ಮನೆಯ ಹತ್ತಿರು ಇರುವಾಗ ಆರೋಪಿತರುಗಳು ಚಾಸಾ-2 ರವರಿಗೆ ನ್ಯಾಯಾಲಯದ ಮುಂದೆ ಇರುವ ದೊಣ್ಣೆಯಿಂದ ಮುಖಕ್ಕೆ ಮತ್ತು ಕೈಗೆ ಹೊಡೆದು ರಕ್ತ ಗಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿಗಳು ನ್ಯಾಯಾಲಯದ ಮುಂದೆ ಇರುವ ದೊಣ್ಣೆಯಿಂದ ತಲೆಗೆ, ಬಲಕೈಗೆ ಮತ್ತು ಬೆನ್ನಿಗೆ ಹೊಡೆದು ರಕ್ತ ಗಾಯ ಮಾಡಿರುತ್ತಾರೆಂದರೆ ಸರಿಯಲ್ಲ. ಅಲ್ಲದೇ ಗಲಾಟೆ ಬಿಡಿಸಲು ಬಂದ ಚಾಸಾ-7 ರವರ ತಲೆಗೆ 3ನೇ ಆರೋಪಿ ದೊಣ್ಣೆಯಿಂದ ಮೈಕೈಗೆ ಹೊಡೆದು ನೋವುಂಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಇದೇ ಕಾರಣಕ್ಕೆ ನಿ.ಪಿ-1 ರಂತೆ ಹೇಳಿಕೆ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿಗಳ ಮಧ್ಯೆ ರಾಜಿಯಾಗಿರುತ್ತದೆ ಎಂದರೆ ಸರಿ. ಆದ್ದರಿಂದ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.*

*ಪಾಟೀ ಸವಾಲುಃ ಆರೋಪಿಪರ ವಕೀಲರಿಂದ ಇರುವುದಿಲ್ಲ.*

*ಮರುವಿಚಾರಣೆಃ ಇರುವುದಿಲ್ಲ*

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

ಅಧಿಕ ಪ್ರ.ದ.ನ್ಯಾ.ದಂ. ರವರು,
ತರೀಕೆರೆ